


National Service Scheme


ಮೈಸೂರು.


ಸಹಾಯವಾಣಿ-1098

ದಿನಾಂಕ ೨೭ ಸೆಪ್ಟೆಂಬರ್ ನಂದು ಬೋಗಧಿಯ ರೂಪನಗರದ ಸರ್ಕಾರಿ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಸುಮಾರು ೨೦೦ ಕ್ಕೂ ಹೆಚ್ಚು ಕುಟುಂಬಗಳು  ಪಾಲ್ಗೊಂಡು ಶಿಬಿರದ ಫಲಾನುಭವಿಗಳಾದರು.
ವಿವಿಧ ವಿಭಾಗದ ವೈದ್ಯರು ತಪಾಸಣೆ ನಡೆಸಿ ಅಗತ್ಯ ಔಷಧಗಳನ್ನು ಸ್ಥಳದಲ್ಲಿಯೇ ಉಚಿತವಾಗಿ ನೀಡಲಾಯಿತು.  ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಮುಂದಾಳತ್ವ ದಲ್ಲಿ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಜಯದೇವ ಹೃದ್ರೋಗ ಸಂಸ್ಥೆಯ ಸಹಯೋಗದೊಂದಿಗೆ ಶಿಬಿರವು ಯಶಸ್ವಿಯಾಗಿ ಜರುಗಿತು. ಕೆ ಆರ್ ಆಸ್ಪತ್ರೆ ಯ RMO ಡಾ|| ರಾಜೇಶ್ ಕುಮಾರ್, ಜಯದೇವ ಆಸ್ಪತ್ರೆ ಯ RMO ಡಾ|| ಪಶುಪತಿ ಎಂ ಹಾಗೂ ಡಾ|| ದಿನೇಶ್ ಹೆಚ್. ಎನ್ , ಡಾ|| ಶ್ವೇತಾ .ಎಮ್, ಡಾ|| ರಶ್ಮಿ. ಬಿ.ಎನ್, ಡಾ|| ದಿವ್ಯ. ಆರ್, ಡಾ|| ದಯಾನಂದ್. ಆರ್ ಹಾಗೂ ಎನ್. ಎಸ್.ಎಸ್. ಅಧ್ಯಕ್ಷರಾದ ಡಾ|| ಆರ್. ಪರಶುರಾಮ್, ಎನ್. ಎಸ್. ಎಸ್ ಕಾರ್ಯದರ್ಶಿ ನಿತೀಶ್, ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಅರ್ಜುನ್ ವಿ, ಸಹ ಕಾರ್ಯದರ್ಶಿ ಸುಮಂತ್ ಹಾಗೂ ಸಾಂಸ್ಕೃತಿಕ ಕಾರ್ಯದರ್ಶಿ ತೇಜಸ್  ಎಂ.ಡಿ. ಉಪಸ್ಥಿತರಿದ್ದರು